ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ನ್ಯಾಯಾಲಯ, ಕುಣಿಗಲ್

ಸಿ.ಸಿ.ನಂ. 63/2020

ಸಿ.ಡಬ್ಲ್ಯೂ -01
ಪಿ.ಡಬ್ಲ್ಯೂ -01

**<u>ಸಾಕ್ಷಿಗೆ ದಿಃ 03.06.2026 ರಂದು ಪ್ರಮಾಣ ವಚನ ಬೋದಿಸಲಾಯಿತು.</u>**

**<u>ಪಾಟೀ ಸವಾಲುಃ ಆರೋಪಿಪರಃ ಶ್ರೀ.V.R ವಕೀಲರಿಂದಃ</u>**

ನಾನು ಪ್ರಕರಣವನ್ನು ರಾಜಿ ಮಾಡಿಕೊಂಡಿರುತ್ತೇನೆ. 2020 ರಲ್ಲಿ ಬೆಳಿಗ್ಗೆ 7 ಗಂಟೆಯ ಸಮಯದಲ್ಲಿ ಆರೋಪಿತರು ಸೌದೆ ಹಾಕಿರುವ ವಿಚಾರಕ್ಕೆ ನನ್ನ ಮೇಲೆ ದೌರ್ಜನ್ಯ ಮಾಡಿಲ್ಲ ನನಗೆ ಯಾವುದೇ ಅವಾಚ್ಯ ಶಬ್ದಗಳಿಂದ ಬೈದಿಲ್ಲವೆಂದರೆ ಸರಿ. ಸರ್ಕಾರಿ ವಕೀಲರು ಮಾಡಿರುವ ಪಾಟೀ ಸವಾಲಿನಲ್ಲಿ ದಿಃ 09.04.2020 ರಂದು ಬೆಳಿಗ್ಗೆ 7.30 ರ ಸಮಯದಲ್ಲಿ ಗಲಾಟೆ ಆಗಿರುವುದು ಸುಳ್ಳು ಎಂದರೆ ಸರಿ. ಆರೋಪಿ 1 ಅವರು ಚಾಸಾ 2 ಅವರ ಸೀರೆಯನ್ನು ಹಿಡಿದು ಎಳೆದಾಡಿ ಮಾಡಿಲ್ಲ ಮತ್ತು ಅವರನ್ನು ಅವಮಾನ ಮಾಡಿಲ್ಲವೆಂದರೆ ಸರಿ. ಆರೋಪಿ 2 ಅವರು ಚಾಸಾ 2 ಅವರ ಬೆನ್ನಿಗೆ ಗುದ್ದಿ ನೋವುಂಟು ಮಾಡಿಲ್ಲವೆಂದರೆ ಸರಿ. ಆರೋಪಿ 2 ಕಲ್ಲಿನಿಂದ ಬಿಸಿ ಹೊಡೆದಿಲ್ಲವೆಂದರೆ ಸರಿ. ಆರೋಪಿ 1 ಪ್ರಾಣ ಬೆದರಿಕೆ ಹಾಕಿಲ್ಲವೆಂದರೆ ಸರಿ. ನಮ್ಮ ಮೊಮ್ಮೆಗಳನ್ನು ಬೆನ್ನಟ್ಟಿ ಹೊಡೆಯಲು ಹೋಗಿದ್ದು ನಾನು ಕೇಳಲು ಹೋದಾಗ ನನಗೆ ಹೊಡೆದಿರುತ್ತಾರೆಂದು ಹೇಳಿರುವುದು ಸುಳ್ಳು ಎಂದರೆ ಸರಿ. ಆರೋಪಿ 1 ಕಲ್ಲಿನಿಂದ ನನಗೆ ಹೊಡೆದಿಲ್ಲವೆಂದರೆ ಸರಿ.

ದಿಃ 13.04.2020 ರಂದು ಪೋಲಿಸರು ಯಾವುದೆ ಮಹಜರ ಮಾಡಿಲ್ಲ ನಾನು ಪೊಲಿಸ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿ. ಪೋಲಿಸರು ಸೀರೆಯನ್ನು ಕಲ್ಲನ್ನು ಜಪ್ತು ಮಾಡಿಲ್ಲವೆಂದರೆ ಸರಿ. ನಾನು ಕಲ್ಲು ಮತ್ತು ಸೀರೆಯನ್ನು ಠಾಣೆಯಲ್ಲಿ ಗುರುತಿಸಿಲ್ಲವೆಂದರೆ ಸರಿ. ನಾನು ಯಾವುದೇ ಹೇಳಿಕೆ ನೀಡಿಲ್ಲ ಆರೋಪಿತರ ಮೇಲಿನ ದ್ವೇಷದಿಂದ ಸುಳ್ಳು ದೂರನ್ನು ನೀಡಿರುತ್ತೇವೆ ಎಂದರೆ ಸರಿ.ಆರೋಪಿತರಿಗೂ ಪ್ರಕರಣಕ್ಕೂ ಯಾವುದೇ ಸಂಬಂದ ಇಲ್ಲವೆಂದರೆ ಸರಿ.

**ಮರು ವಿಚಾರಣೆ ಇಲ್ಲಃ**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ.

ಸಹಿ/-

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.
ಕುಣಿಗಲ್.